RNU AIR DHARWAD

JANUARY 30, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು

<><><>

- ರಾಜ್ಯದ 4 ಲಕ್ಷ ವಿಶೇಷಚೇತನ ಮಕ್ಕಳಿಗೆ, ಅಗತ್ಯ ಸೌಲಭ್ಯ ಖಾತ್ರಿಗೆ, ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಪರಿಶೀಲನೆ.
- ಇಂದಿನಿಂದ ಫೆಬ್ರುವರಿ 13ರ ವರೆಗೆ, 'ಸ್ಪರ್ಷ' ಕುಷ್ಠ ರೋಗ ಜನಜಾಗೃತಿ ಅಭಿಯಾನ.
- 'ಮಿಷನ್ ಕರ್ಮಯೋಗಿ'; ಆಕಾಶವಾಣಿ ಧಾರವಾಡ ಕೇಂದ್ರದಲ್ಲಿ, ಕ್ಲಸ್ಟರ್ ಮಟ್ಟದ, ತರಬೇತಿ ಕಾರ್ಯಾಗಾರ, ಸಂಪನ್ನ.
- ಇಂದು, ಮಹಾತ್ಮ ಗಾಂಧೀಜಿ, ಪುಣ್ಯತಿಥಿ; ಹುತಾತ್ಮರ ದಿನಾಚರಣೆ.

<><><>

ಈಗ ವಾರ್ತೆಗಳ ವಿವರ

<><><>

ರಾಜ್ಯದಲ್ಲಿ 4 ಲಕ್ಷ ವಿಶೇಷಚೇತನ ಮಕ್ಕಳಿದ್ದು,ಅವರಿಗೆ ಸರ್ಕಾರದ ಎಲ್ಲ ಸೌಲಭ್ಯಗಳು ಲಭಿಸುತ್ತಿರುವ ಬಗ್ಗೆ ಪರಿಶೀಲಿಸಿ, ಖಾತ್ರಿ ಪಡಿಸಿಕೊಳ್ಳಲು, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಯೋಜಿಸಿದೆ ಎಂದು, ಆಯೋಗದ ಸದಸ್ಯೆ ಅಪರ್ಣಾ ಕೊಳ್ಳ ತಿಳಿಸಿದ್ದಾರೆ. ಶಿವಮೊಗ್ಗದ ಡಯಟ್ ತರಬೇತಿ ಸಂಸ್ಥೆ ಸಭಾಂಗಣದಲ್ಲಿ, ಗ್ರಾಮೀಣ ಪುನರ್ವಸತಿ ಕಾರ್ಯಕರ್ತರಿಗಾಗಿ ಆಯೋಜಿಸಿದ್ದ, ತರಬೇತಿ ಕಾರ್ಯಾಗಾರ ಉದ್ಘಾಟಿಸಿ, ಮಾತನಾಡಿದರು. ಶೇಕಡ 70ರಷ್ಟು ವಿಶೇಷಚೇತನ ಮಕ್ಕಳು, ಗ್ರಾಮೀಣ ಭಾಗದಲ್ಲಿದ್ದು, ಮನೆಯಲ್ಲಿರುವ ವಿಶೇಷಚೇತನ ಮಕ್ಕಳಿಗೆ, ಸರ್ಕಾರದ ಸೌಲಭ್ಯಗಳನ್ನು ಖಾತ್ರಿ ಪಡಿಸಲು, ಅಧಿಕಾರಿಗಳಿಗೆ ಸೂಚಿಸಿದರು.

<><><>

ಶಿವಮೊಗ್ಗ ಜಿಲ್ಲಾ ವಿಶೇಷಚೇತನರ ಕಲ್ಯಾಣಾಧಿಕಾರಿ, ಸುವರ್ಣ ನಾಯಕ್ ಮಾತನಾಡಿ, ಜಿಲ್ಲೆಯಲ್ಲಿ 3 ಸಾವಿರದ 85 ವಿಶೇಷಚೇತನ ಮಕ್ಕಳಿವೆ. ಆ ಪೈಕಿ, 7 ವಿಶೇಷ ಶಾಲೆಗಳಲ್ಲಿ, 423 ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ, ಎಂದರು.

<><><>

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಆರ್.ಮಂಜುನಾಥ ಮಾತನಾಡಿ, ಜಿಲ್ಲೆಯಲ್ಲಿ 214 ಪೊಸ್ಕೋ ಹಾಗೂ 54 ಬಾಲ್ಯವಿವಾಹ ಪ್ರಕರಣಗಳು ದಾಖಲಾಗಿವೆ. 60 ಬಾಲ್ಯವಿವಾಹಗಳನ್ನು ತಡೆಯಲಾಗಿದೆ, ಎಂದು ಸಭೆಗೆ ಮಾಹಿತಿ ನೀಡಿದರು.

<><><>

ರಾಷ್ಟ್ರೀಯ ಕುಷ್ಠ ರೋಗ ನಿರ್ಮೂಲನೆ ಯೋಜನೆ ಅಡಿ, 'ತಾರತಮ್ಯವನ್ನು ಕೊನೆಗೊಳಿಸುವುದು; ಘನತೆಯನ್ನು ಕಾಪಾಡುವುದು' ಎಂಬ ಧ್ಯೇಯದೊಂದಿಗೆ, ಸ್ಪರ್ಷ ಕುಷ್ಠ ರೋಗ ಜಾಗೃತಿ ಅಭಿಯಾನ, ಇಂದಿನಿಂದ ಫೆಬ್ರುವರಿ 13ನೇ ತಾರೀಖಿನ ವರೆಗೆ, ರಾಜ್ಯಾದ್ಯಂತ ನಡೆಯಲಿದೆ. ಕು ್ಠ ರೋಗದ ಬಗ್ಗೆ, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿ, ಮೂಲಕ ಕು ್ಠ ರೋಗ ಮುಕ್ತ ಸಮಾಜ ನಿರ್ಮಾಣಕ್ಕೆ, ಈ ಆಂದೋಲನ ಸಹಕಾರಿಯಾಗಲಿದೆ ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಶಿಸಿದೆ. 'ಸ್ಪರ್ಷ' ಕು ್ಠ ರೋಗ ಅರಿವು ಆಂದೋಲನದ, ಭಿತ್ತಿಚಿತ್ರಗಳನ್ನು ನಿನ್ನೆ ಬಿಡುಗಡೆಗೊಳಿಸಲಾಗಿದೆ. ಕುಷ್ಠ ರೋಗ, ಸಾಂಕ್ರಾಮಿಕ ರೋಗವಾಗಿದ್ದು, ರೋಗವನ್ನು ದ್ವೇಷಿಸಬೇಕೇ ಹೊರತು, ರೋಗಿಯನ್ನಲ್ಲ. ಸಕಾಲಿಕ ಚಿಕಿತ್ಸೆಯಿಂದ, ಅಂಗವಿಕಲರಾಗುವುದನ್ನು ತಡೆಯಬಹುದು ಎಂದು, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮಟ್ಟದಲ್ಲಿ, ಜನ ಜಾಗೃತಿ ಜಾಥಾಗಳನ್ನು ಆಯೋಜಿಸಲಾಗಿದೆ.

<><><>

ಕೇಂದ್ರ ಪುರಸ್ಕೃತ, 'ಮಿಷನ್ ಕರ್ಮಯೋಗಿ'ಅಭಿಯಾನದಡಿ, ಕೇಂದ್ರ ಸರ್ಕಾರದ ಸಿಬ್ಬಂದಿಯನ್ನು, 'ರೂಲ್ ಟು ರೋಲ್' ಧ್ಯೇಯದೊಂದಿಗೆ, ಜನಸೇವೆಗಾಗಿ ಇನ್ನಷ್ಟು ಕೌಶಲಗಳೊಂದಿಗೆ ರೂಪಿಸಲು, ರಾಷ್ಟ್ರೀಯ ಕಾರ್ಯಾಗಾರವನ್ನು, ದೇಶವ್ಯಾಪಿ ಆಯೋಜಿಸಲಾಗಿದೆ. ಪ್ರಸಾರ ಭಾರತಿಯ, ಆಕಾಶವಾಣಿ ಧಾರವಾಡ ಕೇಂದ್ರದಲ್ಲಿ, ಧಾರವಾಡ ಕ್ಲಸ್ಟರ್ ಮಟ್ಟದ, ತರಬೇತಿ ಕಾರ್ಯಾಗಾರ, ಆಕಾಶವಾಣಿ ಧಾರವಾಡ ಕೇಂದ್ರದ, ಶಾಲ್ಮಲಾ ಸಭಾಂಗಣದಲ್ಲಿ, ಸಿಬ್ಬಂದಿಗಾಗಿ ಜರುಗಿತು. ಧಾರವಾಡ ಆಕಾಶವಾಣಿಯ, ತಾಂತ್ರಿಕ ಉಪ ಮಹಾನಿರ್ದೇಶಕ, ಅರುಣ ಪ್ರಭಾಕರ, ಕಾರ್ಯಕ್ರಮ ಮುಖ್ಯಸ್ಥ ಶರಣಬಸವ ಚೋಳಿನ ಸೇರಿದಂತೆ, 61 ಜನ ಕರ್ಮಯೋಗಿಗಳು, ತರಬೇತಿಯಲ್ಲಿ ಪಾಲ್ಗೊಂಡಿದ್ದರು. ಬೆಂಗಳೂರು ಆಕಾಶವಾಣಿ ಕೇಂದ್ರದ, ತಾಂತ್ರಿಕ ಉಪ ನಿರ್ದೇಶಕ ಪಳನಿ ಅವರು, ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಂಡಿದ್ದರು. ಪ್ರದೇಶ ಸಮಾಚಾರಕ್ಕಾಗಿ, ಅವರು ಮಾಹಿತಿ ನೀಡಿದ್ದಾರೆ.

<><><>

ಪಳನಿ ಧ್ವನಿ 21 ಸೆಕೆಂದುಗಳು

<><><>

ನೈಸರ್ಗಿಕ ಕೃಷಿ ಅಸ್ಥಿವಾರಗಳಾದ, ಬ್ರಹ್ಮಾಸ್ತ್ರ, ನೀಮಾಸ್ತ್ರ, ದಶಪರ್ಣಿ ಮುಂತಾದ ಸಾವಯುವ ರಸಾಯನಗಳನ್ನು ತಯಾರಿಸುವ ಕೌಶಲ, ಮಣ್ಣಿನ ಫಲವತ್ತತೆ ಮತ್ತು ಆರೋಗ್ಯವನ್ನು ಕಾಪಾಡುತ್ತದೆ ಎಂದು, ಧಾರವಾಡ ಕೃಷಿ ವಿಶ್ವವಿದ್ಯಾಲಯದ, ಉಪ ಕುಲಪತಿ, ಪಿ.ಎಲ್.ಪಾಟೀಲ ತಿಳಿಸಿದ್ದಾರೆ. ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ, ರಾಷ್ಟ್ರೀಯ ನೈಸರ್ಗಿಕ ಕೃಷಿ ಅಭಿಯಾನದಡಿ, ಧಾರವಾಡ ಜಿಲ್ಲೆಯ, ಸಮುದಾಯ ಸಂಪನ್ಮೂಲ ವ್ಯಕ್ತಿಗಳು ಹಾಗೂ ಕೃಷಿ ಸಖಿಯರಿಗೆ ಆಯೋಜಿಸಿದ್ದ, 5 ದಿನಗಳ ನೈಸರ್ಗಿಕ ಕೃಷಿ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ, ಮಾತನಾಡಿದರು. ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕ, ಎಂ.ವಿ.ಮಂಜುನಾಥ ಮಾತನಾಡಿ, ಸಾವಯುವ ಕೃಷಿ ಸಂಸ್ಥೆ, ಕೃಷಿ ಆರೋಗ್ಯದ ಜೊತೆ, ಕೃಷಿಕರ ಆರೋಗ್ಯವನ್ನು ಕಾಪಾಡಲು ಯೋಜಿಸಿದೆ. ಕೃಷಿ ತ್ಯಾಜ್ಯವನ್ನು ಸುಡುವುದನ್ನು ಕೃಷಿಕರು ಪ್ರಥಮಾದ್ಯತೆ ಮೇಲೆ ನಿಲ್ಲಿಸಬೇಕು, ಎಂದರು.

<><><>

ಪ್ರಾದೇಶಿಕ ವಿಮಾನ ನಿಲ್ದಾಣ, ಗ್ರೀನ್ ಫೀಲ್ಡ್ಸ್, ವಿಮಾನ ನಿಲ್ದಾಣ ಯೋಜನೆಗಳ ಸುಗಮಗೊಳಿಸುವಿಕೆ ಉಪಕ್ರಮಗಳಿಂದ, ವಿಮ್ಸ್ ಇಂಡಿಯಾ–2026, 'ಸ್ಟೇಟ್ ಚಾಂಪಿಯನ್ ಇನ್ ಏವಿಯೇಷನ್' ರಾಷ್ಟ್ರೀಯ ಪ್ರಶಸ್ತಿಗೆ, ಕರ್ನಾಟಕ ಆಯ್ಕೆಯಾಗಿದೆ. ಈ ಮನ್ನಣೆ, ರಾಷ್ಟ್ರಮಟ್ಟದಲ್ಲಿ, ವಾಯುಯಾನ ಕ್ಷೇತ್ರದ ಬೆಳವಣಿಗೆಗೆ, ರಾಜ್ಯದ ಕೊಡುಗೆಯನ್ನು ಸೂಚಿಸುತ್ತಿದೆ. ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ ಸಹಯೋಗದಲ್ಲಿ, ಖಾಸಗಿ ಪಾಲುದಾರರೊಂದಿಗೆ, ನಾಗರಿಕ ವಿಮಾನಯಾನದಲ್ಲಿ, ಕರ್ನಾಟಕದ ನಾಯಕತ್ವವನ್ನು ಪ್ರತಿಬಿಂಬಿಸಿದೆ.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(40 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಬಹು ಭಾಷಾ ವಿದ್ವಾಂಸ, ಅವಧಾನ ಕಲೆ ಪ್ರವೀಣ, ಭಾರತೀಯ ವಿದ್ಯಾ ಭವನದ, ಬೆಂಗಳೂರು ಶಾಖೆಯ ಸಂಸ್ಕೃತ ವಿಭಾಗದ ನಿರ್ದೇಶಕ, ಶತಾವಧಾನಿ ಡಾಕ್ಟರ್ ಆರ್. ಗಣೇಶ ಅವರನ್ನು, ಕೇಂದ್ರ ಸರ್ಕಾರ, ಪದ್ಮಭೂಷಣ ಪುರಸ್ಕಾರಕ್ಕೆ ಆಯ್ಕೆ ಮಾಡಿದೆ. "ಕನ್ನಡದಲ್ಲಿ ಅವಧಾನ ಕಲೆ" ಎಂಬ ಮಹಾಪ್ರಬಂಧಕ್ಕೆ, ಹಂಪಿ ಕನ್ನಡ ವಿಶ್ವವಿದ್ಯಾಲಯ, ಪ್ರಥಮ ಡಿ. ಲಿಟ್ ಪದವಿ ಪ್ರದಾನಿಸಿ, ಗೌರವಿಸಿದೆ. ಮೂಲತಃ ಕೋಲಾರದವರಾದ ಡಾಕ್ಟರ್ ಆರ್ ಗಣೇಶ, ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಿಂದ, ಮೆಟೀರಿಯಲ್ ಸೈನ್ಸ್ ಹಾಗೂ ಮೆಟಲರ್ಜಿಯಲ್ಲಿ, ಎಂ.ಎಸ್.ಸಿ. ಪದವಿ ಗಳಿಸಿದವರು. ಮೂರನೇ ಅತ್ಯುನ್ನತ ನಾಗರಿಕ ಪುರಸ್ಕಾರಕ್ಕೆ ಭಾಜನರಾದ, ಶತಾವಧಾನಿ ಆರ್.ಗಣೇಶ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಡಾ. ಆರ್. ಗಣೇಶ ಧ್ವನಿ 50 ಸೆಕೆಂದುಗಳು

<><><>

ರಾಷ್ಟ್ರಪಿತ, ಮಹಾತ್ಮ ಗಾಂಧೀಜಿಯವರ, ಪುಣ್ಯತಿಥಿ ಇಂದು. 1948 ಜನವರಿ 30 ರಂದು ಹುತಾತ್ಮರಾದ, ಗಾಂಧೀಜಿಯವರ ಪುಣ್ಯತಿಥಿಯನ್ನು, ಹುತಾತ್ಮರ ದಿನವಾಗಿ, ದೇಶಾದ್ಯಂತ, ಆಚರಿಸಲಾಗುತ್ತದೆ. ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಾಣಾಹುತಿಗೈದ, ಸ್ವಾತಂತ್ರ್ಯ ಹೋರಾಟಗಾರರನ್ನು ಗೌರವಿಸುವ, ರಾಷ್ಟ್ರೀಯ ಸಂಸ್ಮರಣಾ ದಿನ, ಶಹೀದ್ ದಿವಸ್. ಇಂದು ರಾಜ್ಯಾದ್ಯಂತ, ಗಾಂಧೀಜಿ ಸ್ಮೃತಿಗೆ, ಗೌರವ ಅರ್ಪಿಸಲಾಗುತ್ತಿದೆ.

<><><>

ಕಾಂಗ್ರೆಸ್ ಶಾಸಕ ಕೆ.ಸಿ.ವಿರೇಂದ್ರ ಪಪ್ಪಿ ಮತ್ತವರಸಹಚರರ ವಿರುದ್ಧದ, ಅಕ್ರಮ ಬೆಟ್ಟಿಂಗ್ ಪ್ರಕರಣ ಸಂಬಂಧ, ಜಾರಿ ನಿರ್ದೇಶನಾಲಯ, ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯಡಿ, ಕೃಷಿ ಭೂಮಿ, ನಿವೇಶನಗಳು ಸೇರಿ, 177 ಕೋಟಿ 30 ಲಕ್ಷ ರೂಪಾಯಿ ಮೌಲ್ಯದ ಸ್ಥಿರ, ಚರಾಸ್ತಿಗಳನ್ನು ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿಕೊಂಡಿದೆ.

ಈ ವರೆಗೆ ಜಾರಿ ನಿರ್ದೇಶನಾಲಯ, 320 ಕೋಟಿ ರೂಪಾಯಿಗಳಿಗೂ ಅಧಿಕ ಆಸ್ತಿ ಜಪ್ತಿ ಮಾಡಿದ್ದು, ಪ್ರಮುಖ ಆರೋಪಿ, ಕೆ.ಸಿ.ವಿರೇಂದ್ರ, ಇತ್ತೀಚೆಗೆ, ಜಾಮೀನು ಪಡೆದಿದ್ದು, ಜೈಲಿನಿಂದ ಬಿಡುಗಡೆಯಾಗಿದ್ದಾರೆ.

<><><>

ಕೇಂದ್ರ ಸಣ್ಣ, ಸೂಕ್ಷ್ಮ ಹಾಗೂ ಮಧ್ಯಮ ಕೈಗಾರಿಕೆ – ಎಂ.ಎಸ್.ಎಂ.ಇ. ಗಳ ಬಗ್ಗೆ, ಮಹಿಳಾ ನವೋದ್ಯಮಿಗಳಿಗೆ ಅರಿವು ಮೂಡಿಸುವ ಕಾರ್ಯಾಗಾರ, ಇಂದು ಬೆಳಗ್ಗೆ 10.30ಕ್ಕೆ ಶಿವಮೊಗ್ಗದ, ಜಿಲ್ಲಾ ಕೈಗಾರಿಕಾ ಕೇಂದ್ರದ ಸಭಾಂಗಣದಲ್ಲಿ, ಜರುಗಲಿದೆ. ಎಂ.ಎಸ್.ಎಂ.ಇ.ಗಳ, ಕಾರ್ಯಕ್ಷಮತೆ ಹೆಚ್ಚಿಸಿ, ವೇಗವರ್ಧಿಸುವ, ವಿಶ್ವ ಬ್ಯಾಂಕ್ ಪ್ರಾಯೋಜಕತ್ವದ, ಕೇಂದ್ರ ವಲಯ ಯೋಜನೆಯಡಿ, ಜಿಲ್ಲಾ ಕೈಗಾರಿಕಾ ಕೇಂದ್ರ ಹಾಗೂ ಕರ್ನಾಟಕ ರಾಜ್ಯ ಮಹಿಳಾ ಉದ್ಯಮಿಗಳ ಸಂಸ್ಥೆ, ಅವೇಕ್, ಈ ಕಾರ್ಯಾಗಾರ ಸಂಘಟಿಸಿವೆ.

<><><>

ಪ್ರಧಾನಮಂತ್ರಿ ವಿಶ್ವಕರ್ಮ ಯೋಜನೆಯಡಿ, ಕರಕುಶಲವಸ್ತುಗಳ ಪ್ರದರ್ಶನ ಹಾಗೂ ಮಹಿಳಾ ಸ್ವಸಹಾಯ ಸಂಘಗಳು ತಯಾರಿಸಿದ, ಉತ್ಪನ್ನಗಳ ಮಾರಾಟ ಮೇಳಕ್ಕೆ, ಕಲಬುರಗಿ ಜಿಲ್ಲಾಧಿಕಾರಿ, ಬಿ.ಫೌಜಿಯಾ ತರನ್ನುಮ್, ಚಾಲನೆ ನೀಡಿದರು. ಕಲಬುರಗಿಯ ಕನ್ನಡ ಭವನದಲ್ಲಿ, 3 ದಿನಗಳ ಕಾಲ, ಕೇಂದ್ರ ಪುರಸ್ಕೃತ, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ, ಎಂ.ಎಸ್.ಎಂ.ಇ., ಹುಬ್ಬಳ್ಳಿ ಪ್ರಾದೇಶಿಕ ಕಚೇರಿ ಆಯೋಜಿಸಿರುವ ಈ ಮೇಳದಲ್ಲಿ, 50ಕ್ಕೂ ಹೆಚ್ಚು ಮಳಿಗೆಗಳಿವೆ. ಬೆಳಗ್ಗೆ 10.30 ರಿಂದ ರಾತ್ರಿ 8 ಗಂಟೆಯ ವರೆಗೆ, ಮೇಳ ತೆರೆದಿದೆ ಎಂದು, ಎಂ.ಎಸ್.ಎಂ.ಇ. ಜಂಟಿ ನಿರ್ದೇಶಕ, ಎಂ.ಶಶಿಕುಮಾರ ತಿಳಿಸಿದ್ದಾರೆ.

<><><>

ಕಳೆದ 23 ರಿಂದ ಆರಂಭವಾದ, ಐದು ದಿನಗಳ, ಸುಂದರಬನ್ ಪಕ್ಷಿ ಉತ್ಸವದಲ್ಲಿ, 36 ಜನ ಪಕ್ಷಿ ಶಾಸ್ತ್ರಜ್ಞರು, 30 ಸಾವಿರದ 986 ಪಕ್ಷಿಗಳನ್ನು ದಾಖಲಿಸಿದ್ದಾರೆ. ಪಶ್ಚಿಮ ಬಂಗಾಳದ ಅರಣ್ಯ ಇಲಾಖೆ ಆಯೋಜಿಸಿದ್ದ, 4ನೇ ಸುಂದರಬನ್ ಪಕ್ಷಿ ಉತ್ಸವದಲ್ಲಿ, ರಾಜ್ಯದಿಂದ ಸಹ ಆಸಕ್ತ ಪಕ್ಷಿಪ್ರಿಯರು ಪಾಲ್ಗೊಂಡು, ಗಣತಿ ನಡೆಸಿದರು. ಮುಖ್ಯ ವಲಯ, ಹೊರ ಆವರಣ ವಲಯ ಹಾಗೂ ವಸತಿ ಪ್ರದೇಶಗಳಲ್ಲಿ ಕೈಗೊಂಡ, ಸಂಶೋಧನೆಗಳನ್ನು ಅಧಿಕೃತವಾಗಿ ಬಿಡುಗಡೆ ಮಾಡಲಾಗಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು

<><><>

- ರಾಜ್ಯದ 4 ಲಕ್ಷ ವಿಶೇಷಚೇತನ ಮಕ್ಕಳಿಗೆ, ಅಗತ್ಯ ಸೌಲಭ್ಯ ಖಾತ್ರಿಗೆ, ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಪರಿಶೀಲನೆ.
- ಇಂದಿನಿಂದ ಫೆಬ್ರುವರಿ 13ರ ವರೆಗೆ, 'ಸ್ಪರ್ಷ' ಕುಷ್ಠ ರೋಗ ಜನಜಾಗೃತಿ ಅಭಿಯಾನ.
- 'ಮಿಷನ್ ಕರ್ಮಯೋಗಿ'; ಆಕಾಶವಾಣಿ ಧಾರವಾಡ ಕೇಂದ್ರದಲ್ಲಿ, ಕ್ಲಸ್ಟರ್ ಮಟ್ಟದ, ತರಬೇತಿ ಕಾರ್ಯಾಗಾರ, ಸಂಪನ್ನ.
- ಇಂದು, ಮಹಾತ್ಮ ಗಾಂಧೀಜಿ, ಪುಣ್ಯತಿಥಿ; ಹುತಾತ್ಮರ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>